

# ಹುರ್ಗಾಡ

## ಕೆಂಪು ಕಡಲ ಕಿನಾರೆಯ ಊರು

**ಈಜಿಪ್ಟ್ ದೇಶದ ಅತಿ ದೊಡ್ಡ ನಗರಗಳಲ್ಲೊಂದಾದ 'ಹುರ್ಗಾಡ', ಕೆಂಪು ಕಡಲ ಕಿನಾರೆಯಲ್ಲಿ ಅಸ್ತಿತ್ವ ಕಂಡುಕೊಂಡಿರುವ ಊರು. ಪ್ರಪಂಚದ ಎಲ್ಲೆಡೆಯಿಂದ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಆಕರ್ಷಿಸುವ ಕಡಲ ತೀರದ ಉದ್ದಕ್ಕೂ ಇರುವ ಪ್ರವಾಸಿ ಸ್ಥಳಗಳಿಗೆ ಇದುವೇ ರಾಜಧಾನಿ.**

■ **ಡಾ. ಪ್ರೇಮಲತ ಬಿ.**

ಇತಿಹಾಸ, ಪುರಾತನ ಪಳೆಯುಳಿಕೆಗಳು, ಪಿರಮಿಡ್ಡು, ಮಮ್ಮಿಗಳು, ದೇಗುಲಗಳು, ಮ್ಯೂಸಿಯಂ– ಇವೆಲ್ಲಕ್ಕೂ ಪ್ರಸಿದ್ಧವಾಗಿರುವ ದೇಶ ಈಜಿಪ್ಟ್. ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಆಕರ್ಷಿಸುವ ಈ ದೇಶ, ಕೆಂಪು ಸಮುದ್ರದ ತಪ್ಪಲಿನ ಸೌಂದರ್ಯದಿಂದಲೂ ಜನರನ್ನು ಸೆಳೆಯುತ್ತದೆ.

ಕೆಂಪು ಸಮುದ್ರವೆನ್ನುವ ಫಳಫಳಿಸುವ ನೀಲ ಸಮುದ್ರದ ತಟದಲ್ಲಿ ಸೂರ್ಯನ ಶಾಖಕ್ಕೆ ಮೈಯೊಡ್ಡಲು ಪ್ರವಾಸಿಗರು ಪ್ರಪಂಚದ ಎಲ್ಲೆಡೆಯಿಂದ ಆಗಮಿಸುತ್ತಾರೆ. ಅವರನ್ನು ಸ್ವಾಗತಿಸಲು ಕಡಲ ಕಿನಾರೆಯ ಉದ್ದಕ್ಕೂ ಪ್ರವಾಸಿ ಸ್ಥಳಗಳಿವೆ. ಈ ಎಲ್ಲ ಸ್ಥಳಗಳಿಗೂ ರಾಜಧಾನಿಯೆಂದರೆ ಅದು 'ಹುರ್ಗಾಡ' ಎನ್ನುವ ಊರು. 'ಹುರ್ಗಾಡ' ಎನ್ನುವುದು ಅರೇಬಿಕ್ ಮೂಲದ ಪದ. ಅದು ನಿಟಾರಿಯ ಎನ್ನುವ ಹೂವನ್ನು ಸೂಚಿಸುತ್ತದೆ. ವಿಸ್ತೀರ್ಣವನ್ನು ಗಮನದಲ್ಲಿಟ್ಟುಕೊಂಡರೆ, ಈ ಸ್ಥಳ ಈಜಿಪ್ಟ್ ದೇಶದ ಅತಿದೊಡ್ಡ ನಗರವೂ ಹೌದು.

### ಮೀನುಗಾರರ ಊರಿಗೆ ಆಧುನಿಕ ಸ್ಪರ್ಶ

ಸುಮಾರು 46 ವರ್ಷಗಳ ಹಿಂದೆ ಇದೊಂದು ಪುಟ್ಟ ಬೆಸ್ತರ ಹಳ್ಳಿಯಾಗಿತ್ತು. 1980ರ ನಂತರ ವಿದೇಶಿ ಕಂಪನಿಗಳು ಇಲ್ಲಿ ಹಣ ಹೂಡಿ ಪ್ರವಾಸಿಗರನ್ನು ಆಕರ್ಷಿಸಲು ಬೇಕಾದ ಸೌಲಭ್ಯಗಳನ್ನು ಕಲ್ಪಿಸತೊಡಗಿದರು. ಜಲಕ್ರೀಡೆಗಳಾದ ವಿಂಡ್ ಸರ್ಫಿಂಗ್, ಕೈಟ್ ಸರ್ಫಿಂಗ್, ಯಾಕಿಂಗ್, ಸ್ನಾರ್ಕ್ಲಿಂಗ್, ಸೀ ಸ್ಕೋಪಿಂಗ್ ಮತ್ತು ಸ್ಕೂಬಾ ಡೈವಿಂಗ್‌ಗಳ ಜೊತೆಗೆ ಮರಳುಗಾಡಿನ ಚಟುವಟಿಕೆಗಳಾದ ಸ್ಯಾಂಡ್ ಸರ್ಫಿಂಗ್, ಜೀಪ್ ಸಫಾರಿ, ಕ್ವಾಡ್ ಬೈಕಿಂಗ್, ಕ್ಯಾಮಲ್ ರೈಡಿಂಗ್, ಬಗ್ಗೀ ಸಫಾರಿ, ಡೆಸರ್ಟ್ ಕ್ಯಾಂಪಿಂಗ್, ಬೆಲ್ಲಿ ಡ್ಯಾನ್ಸಿಂಗ್ ಇತ್ಯಾದಿಗಳಲ್ಲಿಯೂ ತೊಡಗಲು ಅವಕಾಶವಿದೆ.

ಈಜುಕೊಳಗಳು, ದೊಡ್ಡ ಜಲಕ್ರೀಡಾಂಗಣಗಳು, ನಾಟಕ, ಸಿನಿಮಾ, ಶಾಪಿಂಗ್, ಮನರಂಜನೆ ಮತ್ತು ನಗರ ಭಾಗದ ಪ್ರವಾಸ ಇತ್ಯಾದಿಗಳು ಕೂಡ ಹುರ್ಗಾಡದ ಆಕರ್ಷಣೆಗಳಾಗಿವೆ. ಅಷ್ಟು ಮಾತ್ರವಲ್ಲ, ಈ ನಗರದಿಂದ ರಾಜಧಾನಿ ಕೈರೋ, ಕೊನಾರ್ಕ್ ದೇಗುಲಗಳು, ರಾಜ ಮತ್ತು ರಾಣಿಯರ ಕಣಿವೆ, ಆಸ್ವಾನ್ ದೇಗುಲ ಇತ್ಯಾದಿ ಹಲವು ಸ್ಥಳಗಳಿಗೆ ವಿಮಾನ, ರೈಲು, ಬಸ್ಸು, ಕಾರುಗಳಲ್ಲಿ ಒಂದೆರಡು ದಿನಗಳ ಕಾಲ ಓಡಾಡಿಸಿ ಕರೆತರಲು ಎಲ್ಲ ಬಗೆಯ ಸೌಲಭ್ಯಗಳಿವೆ.

ಪ್ರಪಂಚದ ಎಲ್ಲೆಡೆಯಿಂದ ಪ್ರವಾಸಿಗರನ್ನು ಆಕರ್ಷಿಸುವ ಈ ನಗರಕ್ಕೆ ತನ್ನದೇ ಆದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಿದೆ. 2015ರಲ್ಲಿ ಮತ್ತೊಂದು ಟರ್ಮಿನಲ್ ನಿರ್ಮಿಸಲಾಗಿದೆ. ಇಲ್ಲಿನ ಮುಖ್ಯ ಆದಾಯಮೂಲವೇ ಪ್ರವಾಸಿಗರು. ಹಾಗಾಗಿ ಅವರಿಗೆ ಬೇಕಾದ ಎಲ್ಲ ಬಗೆಯ ಸೌಕರ್ಯಗಳೂ ಇಲ್ಲಿವೆ.

ಹುರ್ಗಾಡ ನಗರದಲ್ಲಿ 36 ಕಿ.ಮೀ. ಉದ್ದದ ಸಮುದ್ರ ತಟವಿದೆ. ಆದರೆ ಬೇರೆ ಸ್ಥಳಗಳಂತೆ ಇಲ್ಲಿ ಉದ್ದುದ್ದದ ಬೀಚುಗಳು ಅಲಭ್ಯ. ಇಲ್ಲಿರುವ ಐಷಾರಾಮಿ ಹೋಟೆಲುಗಳು ಸಮುದ್ರತಟವನ್ನು ತಮ್ಮ ಖಾಸಗಿ ಸ್ವತ್ತಾಗಿ ವಿಭಾಗ ಮಾಡಿಕೊಂಡಿವೆ. ಪ್ರಪಂಚದ ಎಲ್ಲೆಡೆಯಿಂದ ಜನರು ಬರುತ್ತಾರಾದರೂ, ಯೂರೋಪಿಯನ್ನರು ಮತ್ತು ರಷ್ಯನ್ನರು ಹೆಚ್ಚಾಗಿ